**ಪಾಠ–6** **ಆಗಸ್ಟ್ 1–7**

# ಅಪರಿಮಿತ ಸಾಧ್ಯತೆಗಳು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** 1 ಕೊರಿಂಥ 12:12; ಮತ್ತಾಯ 3:16,17; 1 ಕೊರಿಂಥ 12:7; 1 ಕೊರಿಂಥ 1:4–9; ಮತ್ತಾಯ 25:14–30.

**ಸ್ಮರಣವಾಕ್ಯ : ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬನಿಗೆ ಹಂಚಿಕೊಟ್ಟು ನಡೆಸುತ್ತಾನೆ.**

ದೇವರು, ಆತನಿಗೆ ಸಾಕ್ಷಿ ಕೊಡಲು ನಮಗೆ ಕರೆಕೊಡುತ್ತಾನೆ (ಅ.ಕೃ 1:8; ಯೆಶಾಯ 43:10). ಸಾಕ್ಷಿ ಕೊಡುವುದು ಆರಿಸಿಕೊಂಡ ಕೆಲವರಲ್ಲಿ ಮಾತ್ರ ಇರುವ ಒಂದು ವಿಶೇಷ ವರವೇನಲ್ಲ. ಸಾಕ್ಷಿ ಕೊಡುವಿಕೆ ಪ್ರತಿಯೊಬ್ಬ ಕ್ರೈಸ್ತನಿಗೆ ಕೊಡಲ್ಪಟ್ಟ ದೈವೀಕ ಕರೆಯಾಗಿದೆ. ದೇವರು ಕೊಡುವ ಈ ಕರೆಯನ್ನು ವಿವರಿಸಲು ಸತ್ಯವೇದವು ವೈವಿಧ್ಯಮಯವಾದ ಅಭಿವ್ಯಕ್ತಿಯನ್ನು ಬಳಸುತ್ತದೆ. ನಾವು "**ಲೋಕಕ್ಕೆ ಬೆಳಕಾಗಿದ್ದೇವೆ**" (ಮತ್ತಾಯ 5:14; 2 ಕೊರಿಂಥ 5:20; 1 ಪೇತ್ರ 2:9). ನಮ್ಮನ್ನು ಸಾಕ್ಷಿಕೊಡಲು ಮತ್ತು ಸೇವೆ ಮಾಡಲು ಕರೆಕೊಟ್ಟು ಅದೇ ದೇವರು ನಮ್ಮನ್ನು ಆ ಕೆಲಸಕ್ಕೆ ಸಿದ್ಧಪಡಿಸುತ್ತಾನೆ. ಪ್ರತಿಯೊಬ್ಬ ವಿಶ್ವಾಸಿಗೂ ಆಧ್ಯಾತ್ಮಿಕ ವರಗಳನ್ನು ಕೊಡುತ್ತಾನೆ. ದೇವರು (ಶಿಕ್ಷಿತ) ಅರ್ಹರಿಗೆ ಮಾತ್ರ ಕರೆ ನೀಡುವುದಿಲ್ಲ, ಆದರೆ ಯಾರಿಗೆ ಕರೆಕೊಡುತ್ತಾನೋ ಅವರನ್ನು ಅರ್ಹರನ್ನಾಗಿ ಮಾಡುತ್ತಾನೆ.

---

* **ಆಗಸ್ಟ್ 8ರ ಸಬ್ಬತ್ತಿನ ದಿನದ ಪಾಠಕ್ಕೆ ಸಿದ್ಧರಾಗಲು ಈ ವಾರದ ಪಾಠವನ್ನು ಓದಿಕೊಳ್ಳಿರಿ.**

ತನ್ನನ್ನು ನಂಬಿದವರಿಗೆ ಯಾವ ರೀತಿಯಾಗಿ ರಕ್ಷಣೆಯನ್ನೂ ಉಚಿತವಾಗಿ ಕೊಡುವನೋ, ಅದೇ ರೀತಿಯಾಗಿ ಆತನು ಅವರಿಗೆ ಉಚಿತವಾಗಿ ವರಗಳನ್ನು ಕೊಡುವವನಾಗಿದ್ದಾನೆ.

ನಾವು ನಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟಾಗ, ಮತ್ತು ಆತನ ಸೇವೆಗಾಗಿ ನಮ್ಮನ್ನು ಪ್ರತಿಷ್ಠೆ ಮಾಡಿಕೊಂಡಾಗ, ಆತನಿಗಾಗಿ ನಾವು ಮಾಡಲಿರುವ ಸೇವೆಯ ಸಾಧ್ಯತೆಗಳಿಗೆ ಕೊನೆ ಮೊದಲೆಂಬುದೇ ಇಲ್ಲ. "ಸ್ವಾರ್ಥವನ್ನು ಬಿಟ್ಟುಕೊಟ್ಟು, ತನ್ನ ಹೃದಯದಲ್ಲಿ ಪವಿತ್ರಾತ್ಮ ದೇವರು ಕೆಲಸಮಾಡಲು ಅವಕಾಶ ಮಾಡಿಕೊಟ್ಟವರನ್ನು ಮತ್ತು ದೇವರಿಗೆ ತಮ್ಮ ಜೀವನವನ್ನು ಸಂಪೂರ್ಣವಾಗಿ ಒಪ್ಪಿಸಿಕೊಟ್ಟವರನ್ನು ಸೇವೆಗೆ ಬಳಸಿಕೊಳ್ಳುವುದಕ್ಕೆ ಮಿತಿಯೇ ಇಲ್ಲ"– ಎಲೆನ್ ಜಿ ವೈಟ್, ದಿ ಮಿನಿಸ್ಟ್ರೀ ಆಫ್ ಹೀಲಿಂಗ್, ಪುಟ 159.

ಪವಿತ್ರಾತ್ಮ ದೇವರ ವರದಿಂದ ಮಾಡಲ್ಪಡುವ ಸೇವೆಗಿರುವ ಅನಿಯಮಿತ ಸಾಧ್ಯತೆಗಳನ್ನು ಕುರಿತು ಈ ವಾರ ಅಧ್ಯಯನ ಮಾಡೋಣ.

**ಭಾನುವಾರ** **ಆಗಸ್ಟ್ 2**

## ವರಗಳಲ್ಲಿ ಭಿನ್ನತೆ; ಸೇವೆಯಲ್ಲಿ ಏಕತೆ

ಕ್ರಿಸ್ತನ ಶಿಷ್ಯರುಗಳು ಒಬ್ಬೊಬ್ಬರು ಭಿನ್ನ ಸ್ವಭಾವದವರಾಗಿದ್ದರು ಎಂಬುದನ್ನು ಕುರಿತು ಚಿಂತನೆ ಮಾಡಿ ನೋಡಿದ್ದೀರಾ? ಅವರ ಹಿನ್ನೆಲೆಗಳು, ವ್ಯಕ್ತಿತ್ವಗಳು, ಸ್ವಭಾವಗಳು ಮತ್ತು ವರಗಳು ಬಹಳವಾಗಿ ವಿಭಿನ್ನವಾಗಿದ್ದವು. ಆದರೆ ಈ ಸ್ವಭಾವಗಳೇನೂ ಸಭೆಗೆ ಹೊರೆಯಾಗಿರಲಿಲ್ಲ. ಆ ಸ್ವಭಾವಗಳು ಸಭೆಗೆ ಬಲವೇ ಆಗಿದ್ದವು. ಮತ್ತಾಯ ಒಬ್ಬ ಸುಂಕದವನು. ಅವನು ನಿಖರ, ನೇರನುಡಿಯ ಮತ್ತು ನಿಷ್ಕಪಟವಾದಿಯಾಗಿದ್ದನು. ಪೇತ್ರನಾದರೋ ಈ ಸ್ವಭಾವಗಳಿಗೆ ಭಿನ್ನ ಸ್ವಭಾದವನಾಗಿದ್ದನು. ಅವನು ತಾನು ಏನು ಉತ್ತರಿಸುತ್ತಿದ್ದೇನೆ ಎಂಬುದನ್ನು ಚಿಂತಿಸದೆ ತಕ್ಷಣ ಮಾತಾಡುವ ಸ್ವಭಾವದವನು. ಅತ್ಯುತ್ಸಾಹಿ ಮತ್ತು ಒಮ್ಮೆಗೆ ಪ್ರೇರಿತನಾಗುವವನು, ಆದರೆ ಸಹಜ ನಾಯಕತ್ವ ಗುಣಧರ್ಮ ಪಡೆದುಕೊಂಡವನೂ ಆಗಿದ್ದನು. ಯೋಹಾನ ಸುಕೋಮಲ ಸ್ವಭಾವದವನೂ ಮತ್ತು ಮುಚ್ಚುಮರೆಯಿಲ್ಲದೆ ಮಾತಾಡುವವನೂ ಆಗಿದ್ದನು. ಆಂದ್ರೆಯ ಜನರ

ಮನುಷ್ಯ. ಅವನಿಗೆ ತನ್ನ ಪರಿಸರದ ಬಗ್ಗೆ ಒಳ್ಳೇ ಜ್ಞಾನವಿತ್ತು. ಅನ್ಯರನ್ನೂ ಮನಸ್ಸಿಗೆ ಬಹಳ ಹಚ್ಚಿಕೊಳ್ಳುತ್ತಿದ್ದನು. ತೋಮ, ಪ್ರಶ್ನಿಸುವುದರಲ್ಲಿ ಒಲವು ತೋರುವವನೂ ಮತ್ತು ಸಂಶಯ ಸ್ವಭಾವದವನಾಗಿದ್ದನು. ಹೀಗೆ ಪ್ರತಿಯೊಬ್ಬ ಶಿಷ್ಯನಲ್ಲಿ ವಿಭಿನ್ನವಾದ ವ್ಯಕ್ತಿತ್ವಗಳೂ ಮತ್ತು ವರಗಳಿದ್ದಾಗಿಯೂ, ದೇವರು ಅವರನ್ನು ತನಗೆ ಸಾಕ್ಷಿಕೊಡುವ ಕೆಲಸದಲ್ಲಿ ಬಲವಾಗಿ ಉಪಯೋಗಿಸಿಕೊಂಡಿದ್ದನು.

**1 ಕೊರಿಂಥ 12:12,13, 18–22ನ್ನು ಓದಿಕೊಳ್ಳಿರಿ. ಕ್ರಿಸ್ತನ ದೇಹವಾದ ಸಭೆಗೆ ವಿಭಿನ್ನ ವರಗಳುಳ್ಳ ಜನರ ಅಗತ್ಯವಿದೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಈ ವೇದಭಾಗಗಳಲ್ಲಿ ನಾವು ಕಂಡುಕೊಳ್ಳುವುದೇನು?**

________________________________________

________________________________________

ವಿವಿಧ ಪ್ರತಿಭೆಗಳ ಮತ್ತು ಸಾಮರ್ಥ್ಯಗಳ ವೈವಿಧ್ಯಮಯ ಹಿನ್ನಲೆಗಳಿಂದ ಬಂದ ಜನರನ್ನು ತನ್ನ ಸೇವೆಗೆ ಸೇರಿಸಿಕೊಳ್ಳುವವರಲ್ಲಿಯೂ ಮತ್ತು ಸೇವೆಗಾಗಿ ಅವನಿಗೆ ವರಗಳನ್ನು ಕೊಡುವುದರಲ್ಲಿಯೂ ದೇವರು ಸಂತೋಷಪಡುವವನಾಗಿದ್ದಾನೆ. ಕ್ರಿಸ್ತನ ದೇಹವು (ಸಭೆಯು) ಒಂದೇ ಬಗೆಯ, ಒಂದೇ ರೀತಿಯಲ್ಲಿರುವ ಜನರ ಗುಂಪಲ್ಲ. ಸಭೆ, ಒಂದೇ ರೀತಿಯಲ್ಲಿ ಆಲೋಚನೆ ಮಾಡುವ, ಒಂದೇ ಹಿನ್ನೆಲೆಯ ಜನರಿರುವ ಕಂಟ್ರಿ ಕ್ಲಬ್ ಸಹ ಇದಲ್ಲ. ಸಭೆ, ವಿವಿಧ ವರಗಳಿರುವ, ಧರ್ಮಶಾಸ್ತ್ರ ಮತ್ತು ಕ್ರಿಸ್ತನ ಮೇಲೆ ಪ್ರೀತಿಯಲ್ಲಿ ಒಂದುಗೂಡಿರುವ ಪ್ರಪಂಚಕ್ಕೆ, ಆತನ ಪ್ರೀತಿ ಮತ್ತು ಸತ್ಯವನ್ನು ಹಂಚಿಕೊಳ್ಳಲು ತಮ್ಮನ್ನು ಒಪ್ಪಿಸಿಕೊಟ್ಟಿರುವ ಜನರ ಕ್ರಿಯಾತ್ಮಕ ಸಂಯುಕ್ತ ಯತ್ನ (ರೋಮ 12:4; 1 ಕೊರಿಂಥ 12:12). ಕ್ರಿಸ್ತನ ದೇಹದ (ಸಭೆಯ) ಸದಸ್ಯರಲ್ಲಿ ವಿಭಿನ್ನ ವರಗಳಿವೆ ನಿಜ, ಆದರೆ ಅವುಗಳಲ್ಲಿ ಪ್ರತಿಯೊಂದು ಬಹುಬೆಲೆಯುಳ್ಳವು; ಕ್ರಿಸ್ತನ ದೇಹದ (ಸಭೆಯ) ಆರೋಗ್ಯಕರ ಕೆಲಸ ಮಾಡುವುದರಲ್ಲಿ ಪ್ರತಿಯೊಂದೂ ವಿಮರ್ಶಾತ್ಮಕವಾದದ್ದು. ಯಾವ ರೀತಿಯಾಗಿ ಕಣ್ಣುಗಳಿಗೆ, ಕಿವಿಗಳಿಗೆ ಮತ್ತು ಮೂಗಿಗೆ ಮಾಡಲು ಬೇರೆ ಬೇರೆ ಕೆಲಸವಿದ್ದರೂ, ದೇಹಕ್ಕೆ ಅವು ಹೇಗೆ

ಅವಶ್ಯವಾಗಿದೆಯೋ ಹಾಗೆಯೇ ಎಲ್ಲಾ ವರಗಳೂ ಸಭೆಗೆ ಅವಶ್ಯವಾಗಿವೆ (1 ಕೊರಿಂಥ 12:21, 22).

ನೀವೇನಾದರೂ ಮಾನವ ದೇಹವನ್ನು ತುಂಬಾ ಎಚ್ಚರಿಕೆಯಿಂದ ಗಮನಿಸಿದರೆ, ದೇಹದ ಅತ್ಯಂತ ಸಣ್ಣ ಭಾಗಕ್ಕೂ ನಿರ್ಣಾಯಕ ಪಾತ್ರವಿರುವುದನ್ನು ಕಾಣಬಹುದು. ಉದಾಹರಣೆಗೆ ರಪ್ಪೆಯ ಕೂದಲನ್ನೇ ತೆಗೆದುಕೊಳ್ಳಿ. ಈ ನಿಷ್ಕೃಷ್ಟವಾದ ರಪ್ಪೆಯ ಕೂದಲುಗಳು ಇಲ್ಲದಿದ್ದರೆ ಏನಾಗುತ್ತಿತ್ತು? ಧೂಳಿನ ಕಣಗಳು ಕಣ್ಣ ಒಳಹೊಕ್ಕು ದೃಷ್ಟಿಯನ್ನು ಅಸ್ಪಷ್ಟ ಮಾಡಿಬಿಡುತ್ತಿತ್ತು. ಅದರ ಪರಿಣಾಮವಾಗಿ ಸರಿಪಡಿಸಲಾಗದ ಹಾನಿಯಾಗುವ ಸಂಭವವೂ ಉಂಟು. ಸಭೆಯ ಒಬ್ಬ ಸಭಿಕ, ತುಂಬಾ "ಕೆಲಸಕ್ಕೆ ಬಾರದವನು" ಎಂದು ಅನಿಸಿದರೂ, ಕ್ರಿಸ್ತನ ದೇಹಕ್ಕೆ ಅವನು ಅವಶ್ಯವಾದ ಭಾಗವಾಗಿಯೂ ಮತ್ತು ಪವಿತ್ರಾತ್ಮನಿಂದ ದೈವಿಕವರಗಳನ್ನು ಪಡೆದುಕೊಂಡವನಾಗಿರಲಿಕ್ಕೂ ಸಾಕು. ನಾವು ಈ ಎಲ್ಲಾ ವರಗಳನ್ನು ಮೊತ್ತವಾಗಿ ದೇವರಿಗೆ ಪ್ರತಿಷ್ಠೆ ಮಾಡಿದಾಗ ಪ್ರತಿಯೊಬ್ಬರೂ ಶಾಶ್ವತವಾದ ವ್ಯತ್ಯಾಸವನ್ನುಂಟುಮಾಡಬಹುದು.

**ನೀವು ಎಷ್ಟೇ ಪ್ರತಿಭಾವಂತರಾಗಿರ್ರಿ, ನೀವು ಯಾವಯಾವ ವಿಷಯಗಳಲ್ಲಿ ನಿಷ್ಣಾತರಾಗಿರುವುದಿಲ್ಲವೋ, ಸಭೆಯಲ್ಲಿರುವ ಇತರರು ಆ ವಿಷಯಗಳಲ್ಲಿ ನಿಷ್ಣಾತರಾಗಿರುವ ಸಂಭವವಿದೆ. ಈ ಸಂಗತಿ ನೀವು ಸಭೆಯಲ್ಲಿ ನಿಮ್ಮ ಸ್ಥಾನವೇನು ಎಂಬುದನ್ನು ಕಂಡುಕೊಳ್ಳುವುದಕ್ಕೆ ಸಹಾಯಮಾಡುವುದು ಹೇಗೆ?**

**ಸೋಮವಾರ** **ಆಗಸ್ಟ್, 3**

## ದೇವರು : ಎಲ್ಲಾ ಒಳ್ಳೇ ವರದಾನಗಳ ಕೊಡುವವನು

1 ಕೊರಿಂಥ 12:11,18; ಎಫೆಸ 4:7,8 ಮತ್ತು ಯಾಕೋಬ 11:13ರ ಪ್ರಕಾರ ಎಲ್ಲಾ ವರಗಳ ಮೂಲಕರ್ತೃ ದೇವರೇ ಆಗಿದ್ದಾನೆ ಮತ್ತು "ಪ್ರತಿಯೊಂದು ಪರಿಪೂರ್ಣ ವರವೂ" ಆತನ ಕೈಯಿಂದಲೇ ಬರುತ್ತವೆ. ನಮ್ಮ ಜವಾಬ್ದಾರಿಗೆ ಹೊಂದಿಕೊಳ್ಳುವ ವರಗಳನ್ನು ಪವಿತ್ರಾತ್ಮ ದೇವರೇ ಕೊಡುತ್ತಾನೆ. ಭರವಸೆಯಿಡಿರಿ. ಆತನು ಕೊಡುವ ವರಗಳನ್ನು ಉತ್ತಮವಾಗಿ ಆತನ ಸೇವೆಮಾಡಲು ಮತ್ತು ಆತನ ಪವಿತ್ರ ಮಹಿಮೆಪಡಿಸಲು ಉಪಯೋಗಿಸಿಕೊಳ್ಳುವನು.

**ಮಾರ್ಕ 13:34 ಮತ್ತು 1 ಕೊರಿಂಥ 12:11ನ್ನು ಓದಿಕೊಳ್ಳಿರಿ. ದೇವರು ಯಾರಿಗೆ ಆಧ್ಯಾತ್ಮಿಕ ವರಗಳನ್ನು ಕೊಡುವನು?**

ಸತ್ಯವೇದವು ಸ್ಫಟಿಕದಷ್ಟು ಬಹು ಸ್ಪಷ್ಟ. ಬೇರೆಯವರೊಂದಿಗೆ ಸುವಾರ್ತೆ ಹಂಚಿಕೊಳ್ಳುವ ವಿಷಯದಲ್ಲಿ ನಮಗೆ ದೇವರು ವಿಶೇಷವಾದ ಕೆಲಸಗಳನ್ನು ವಹಿಸಿದ್ದಾನೆ. ಯೇಸು, ತನ್ನ ಮನೆಯ ಯಜಮಾನನ ಸಾಮ್ಯದಲ್ಲೂ, ಯಜಮಾನ ಮನೆಯನ್ನು ಬಿಟ್ಟು ಬೇರೊಂದು ದೇಶಕ್ಕೆ ಹೋಗುವಾಗ ಆಳುಗಳಿಗೆ ತನ್ನ ಮನೇ ಆಡಳಿತವನ್ನು ಒಪ್ಪಿಸಿಕೊಟ್ಟು ಒಬ್ಬೊಬ್ಬನಿಗೆ ಅವನವನು ಮಾಡಬೇಕಾದ ಕೆಲಸಗಳಿಗೆ ನೇಮಿಸುವುದನ್ನು ಕುರಿತು ಹೇಳಿದ್ದಾನೆ (ಮಾರ್ಕ 13:34). ಈ ಸಾಮ್ಯದಂತೆಯೇ ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಮಾಡಬೇಕಾದ ಕೆಲಸವನ್ನು ನೇಮಿಸಲಾಗಿದೆ. ಯಾವ ಕೆಲಸ ಅಥವಾ ಸೇವೆಯನ್ನು ಮಾಡಲು ಕರೆಕೊಡಲಾಗಿದೆಯೋ ಅದನ್ನು ಯಶಸ್ವಿಯಾಗಿ ಮಾಡಿಮುಗಿಸಲು ಬೇಕಾದ ಆಧ್ಯಾತ್ಮಿಕ ಶಕ್ತಿಯನ್ನು ದೇವರೇ ಕೊಡುವವನಾಗಿದ್ದಾನೆ. ನಾವು ನಮ್ಮ ಜೀವನಗಳನ್ನು ಯೇಸುಕ್ರಿಸ್ತನಿಗೆ ಒಪ್ಪಿಸಿಕೊಟ್ಟಾಗ, ಮತ್ತು ದೀಕ್ಷಾಸ್ನಾನದ ಮುಖಾಂತರ ಆತನ ದೇಹದ (ಸಭೆಯ) ಸದಸ್ಯರಾದಾಗ, ಪವಿತ್ರಾತ್ಮ ದೇವರು ನಮಗೆ ಬೇಕಾದ ವರದಾನ ಮಾಡುತ್ತಾನೆ, ಆಗ ನಾವು ಆ ದೇಹಕ್ಕೆ ಸೇವೆ ಮಾಡಬಹುದು ಮತ್ತು ಲೋಕಕ್ಕೆ ಸಾಕ್ಷಿಯಾಗಿರಬಹುದು.

ಕ್ರಿ.ಶ. 1903ರಲ್ಲಿ, ವೈಟಮ್ಮನವರು ಒಬ್ಬ ಮನುಷ್ಯನಿಗೆ ಪತ್ರವೊಂದನ್ನು ಬರೆದಿದ್ದಾರೆ. ದೇವರು, ತನ್ನ ಸೇವೆಮಾಡಲು ಆತನಿಗೆ ಕೊಟ್ಟಿರುವ ವರಗಳನ್ನು ಅವನು ಉಪಯೋಗಿಸಬೇಕೆಂದು ವೈಟಮ್ಮ ಅವನನ್ನು ಹೀಗೆ ಪ್ರೋತ್ಸಾಹಿಸಿದ್ದಾರೆ– "ನಾವೆಲ್ಲರೂ ದೇವರ ಸಭೆಯ ಸದಸ್ಯರಾಗಿದ್ದೇವೆ. ನಮ್ಮೆಲ್ಲರಿಗೆ ದೊಡ್ಡ ರೀತಿಯಲ್ಲಿ ಇಲ್ಲವೇ ಸಣ್ಣರೀತಿಯಲ್ಲಿ ಪ್ರತಿಭೆಗಳನ್ನು ಕೊಡಲಾಗಿದೆ. ಅವುಗಳನ್ನು ಬಳಸಿಕೊಳ್ಳುವ ಜವಾಬ್ದಾರಿಯೂ ನಮ್ಮದೇ ಆಗಿದೆ. ನಮಗೆ ಕೊಡಲ್ಪಟ್ಟಿರುವ ತಲಾಂತು ದೊಡ್ಡದೋ ಅಥವಾ ಸಣ್ಣದೋ, ಅವುಗಳನ್ನು ದೇವರ ಸೇವೆಯಲ್ಲಿ ಬಳಸಿಕೊಳ್ಳಬೇಕು. ಯಾರ್ಯಾರಿಗೆ ಯಾವ್ಯಾವ ವರ ಕೊಡಲಾಗಿದೆಯೋ ಅವುಗಳನ್ನು ಬಳಸಿಕೊಳ್ಳುವ ಹಕ್ಕು ಪ್ರತಿಯೊಬ್ಬರಿಗೂ ಇದೆ ಎಂಬುದನ್ನು ನಾವೂ ಮನಗಾಣಬೇಕು".

ನಮಗೆ ಸಣ್ಣ ಪ್ರಮಾಣದಲ್ಲಿ ದೈಹಿಕ, ಬೌದ್ಧಿಕ ಅಥವಾ ಆಧ್ಯಾತ್ಮಿಕ ಬಂಡವಾಳ ಕೊಡಲಾಗಿದೆಯೆಲ್ಲಾ ಅದನ್ನು ಎಂದಿಗೂ ತುಚ್ಛವಾಗಿ ಕಾಣಬಾರದು"– ಲೆಟರ್ 260, ಡಿಸೆಂಬರ್ 2, 1903.

**ಅ.ಕೃ. 10:36–38; ಮತ್ತಾಯ 3:16,17; ಮತ್ತು ಅ.ಕೃ. 2:38–42ನ್ನು ಓದಿಕೊಳ್ಳಿರಿ. ದೀಕ್ಷಾಸ್ನಾನದ ಸಮಯದಲ್ಲಿ ಪವಿತ್ರಾತ್ಮನ ವಾಗ್ದಾನವನ್ನು ಕುರಿತು ಈ ವಾಕ್ಯಗಳು ನಮಗೆ ಬೋಧಿಸುವುದೇನು?**

ಯಾವ ರೀತಿಯಾಗಿ, ಯೇಸುಕ್ರಿಸ್ತನು ಲೋಕಕ್ಕೆ ಸೇವೆಯನ್ನು ಸಲ್ಲಿಸುವುದಕ್ಕಾಗಿ ಆತನನ್ನು ಸಿದ್ಧಪಡಿಸಲು ಮತ್ತು ಪರಿಪೂರ್ಣವಾಗಿ ಅಣಿಗೊಳಿಸಲು ದೀಕ್ಷಾಸ್ನಾನದ ಸಮಯದಲ್ಲಿ ಪವಿತ್ರಾತ್ಮನಿಂದ ಪ್ರತಿಷ್ಠಿಸಲಾಯಿತೋ, ಅದೇ ರೀತಿಯಲ್ಲಿ ನಮ್ಮ ದೀಕ್ಷಾಸ್ನಾನದ ಸಮಯದಲ್ಲಿ ನಮಗೂ ಪವಿತ್ರಾತ್ಮನನ್ನು ವಾಗ್ದಾನ ಮಾಡಲಾಗಿದೆ. ಈ ಪ್ರಪಂಚಕ್ಕೂ ಮತ್ತು ಆತನ ಸಭೆಗೂ ಸೇವೆ ಸಲ್ಲಿಸುವುದಕ್ಕಾಗಿ ಆತನು ನಮಗೆ ಆಧ್ಯಾತ್ಮಿಕ ವರಗಳನ್ನು ಕೊಟ್ಟಿದ್ದಾನೆ, ಆತನು, ತಾನು ನುಡಿದದ್ದನ್ನು ನೆರವೇರಿಸಿದ್ದಾನೆ ಎಂಬ ಧನಾತ್ಮಕ ಭರವಸೆಯನ್ನು ನಾವು ಹೊಂದಿರಬೇಕೆಂದು ಹಂಬಲಿಸುತ್ತಾನೆ.

**ಮಂಗಳವಾರ** **ಆಗಸ್ಟ್, 4**

## ಆಧ್ಯಾತ್ಮಿಕ ವರಗಳ ಉದ್ದೇಶ

**1 ಕೊರಿಂಥ 12:7 ಮತ್ತು ಎಫೆಸ 4:11–16ನ್ನು ಓದಿಕೊಳ್ಳಿರಿ. ಪ್ರತಿಯೊಬ್ಬ ವಿಶ್ವಾಸಿಗೂ ದೇವರು ಆಧ್ಯಾತ್ಮಿಕ ವರಗಳನ್ನು ಕೊಟ್ಟಿದ್ದು ಏಕೆ? ಆ ವರಗಳ ಉದ್ದೇಶಗಳೇನು?**

________________________________________

________________________________________

ಆಧ್ಯಾತ್ಮಿಕ ವರಗಳು ಹಲವಾರು ಉದ್ದೇಶಗಳನ್ನು ನೆರವೇರಿಸುತ್ತವೆ. ತನ್ನ ಸುವಾರ್ತೆಯನ್ನು ಸಾರಬೇಕಾದ, ತನ್ನ ಸಭೆಯನ್ನು ಪೋಷಿಸುವ ಮತ್ತು ಬಲಪಡಿಸುವುದಕ್ಕಾಗಿ ದೇವರು ಸಭೆಗೆ ಆಧ್ಯಾತ್ಮಿಕ ವರಗಳನ್ನು ನೀಡುತ್ತಾನೆ.

ಈ ಪ್ರಪಂಚದಲ್ಲಿ ದೇವರು ತನ್ನ ಸುವಾರ್ತೆ ಸಾರಿ ಮುಗಿಸಲಿಕ್ಕಾಗಿ ಸಭೆಗಳಲ್ಲಿ ಒಗ್ಗಟ್ಟು ಮೂಡುವಂತ ರೀತಿಯಲ್ಲಿ ತನ್ನ ಆಧ್ಯಾತ್ಮಿಕ ವರಗಳನ್ನು ರೂಪಿಸಿದ್ದಾನೆ. ದೇವರು ತನ್ನ ಸಭೆಗೆ ಕೊಡುವ ಆಧ್ಯಾತ್ಮಿಕ ವರಗಳಾವುವು ಎಂಬುದಕ್ಕೆ ಸತ್ಯವೇದದ ಬರಹಗಾರರು ಕೊಟ್ಟಿರುವ ಉದಾಹರಣೆಗಳು : ದೇವರ ಸೇವೆ, ಜನಸೇವೆ, ಸಾರುವಿಕೆ, ಬೋಧನೆ, ಉತ್ತೇಜನ ಮತ್ತು ಕರುಣೆ ದಯಪಾಲಿಸು ಇತ್ಯಾದಿ. ಇದಲ್ಲದೆ ಸತ್ಯವೇದ, ಆತಿಥ್ಯ, ಕರುಣೆ, ಸಹಾಯ ಮಾಡುವ ಮನೋಭಾವ ಮತ್ತು ಸಂತೋಷದಿಂದಿರುವಿಕೆ ಎಂಬ ವರಗಳ ಬಗ್ಗೆಯೂ ಮಾತನಾಡಿದೆ. ಈ ವರಗಳ ಸಂಪೂರ್ಣ ಪಟ್ಟಿಯನ್ನು ತಿಳಿದುಕೊಳ್ಳಬೇಕಾದರೆ ರೋಮಾಪುರದವನಿಗೆ ಬರೆದ ಪತ್ರಿಕೆಯ 12ನೇ ಅಧ್ಯಾಯ ಮತ್ತು 1 ಕೊರಿಂಥ 12ನೇ ಅಧ್ಯಾಯವನ್ನು ಓದಿಕೊಳ್ಳಿರಿ.

ಬಹುಶಃ ನೀವು ಆಧ್ಯಾತ್ಮಿಕ ಮತ್ತು ಸ್ವಭಾವಸಿದ್ಧ ಪ್ರತಿಭೆಗಳ ನಡುವಿರುವ ಸಂಬಂಧವೇನು ಎಂದು ಆಶ್ಚರ್ಯಪಡುತ್ತಿರಬಹುದು. ಆಧ್ಯಾತ್ಮಿಕ ವರಗಳು ದೈಹಿಕವಾಗಿ ಕೊಡಲ್ಪಟ್ಟ ಗುಣಧರ್ಮಗಳು. ಇವು ಪ್ರತಿಯೊಬ್ಬ ವಿಶ್ವಾಸಿಗೆ, ಸಭೆಯಲ್ಲಿ ದೇವರ ಸೇವೆ ಮಾಡಲು ಮತ್ತು ಪ್ರಪಂಚದಲ್ಲಿ ಜನರ ಸೇವೆಮಾಡಲು ಪವಿತ್ರಾತ್ಮ ದೇವರು ಕೊಟ್ಟ ವರಗಳು. ಇವುಗಳ ಜೊತೆಗೆ ಪವಿತ್ರಾತ್ಮ ದೇವರಿಂದ ಪರಿಶುದ್ಧಮಾಡಲ್ಪಟ್ಟ ಸ್ವಭಾವಸಿದ್ಧ ಪ್ರತಿಭೆಗಳನ್ನು ಕ್ರಿಸ್ತನ ಸೇವೆಮಾಡಲು ಉಪಯೋಗಿಸಿಕೊಳ್ಳಬಹುದು. ಎಲ್ಲಾ ಸ್ವಭಾವಸಿದ್ಧ ಪ್ರತಿಭೆಗಳೂ ದೇವರಿಂದಲೇ ಕೊಡಲ್ಪಟ್ಟವು, ಆದರೆ ಎಲ್ಲವನ್ನೂ ಕ್ರಿಸ್ತನ ಸೇವೆಗೆ ಉಪಯೋಗಿಸಿಕೊಳ್ಳಲಾಗದು.

ಪವಿತ್ರಾತ್ಮನಿಂದ ಕೊಡಲ್ಪಟ್ಟ ವರಗಳೊಂದನ್ನೇ ಪ್ರತಿಭೆಗಳಾಗಿ ಸಾಮ್ಯದಲ್ಲಿ ಪ್ರತಿನಿಧಿಸಿಲ್ಲ. ಅವು ದೇವರು ಕೊಡುವ ವರಗಳು ಮತ್ತು ದತ್ತಿಗಳು, ಅದು ಸ್ವಕಲ್ಪಿತ ಅಥವಾ ಸಂಪಾದಿಸಿದ, ಸ್ವಭಾವಸಿದ್ಧ ಅಥವಾ ಆಧ್ಯಾತ್ಮಿಕವಾದ ವರಗಳೋ ಅಥವಾ ದತ್ತಿಗಳೋ ಒಟ್ಟಾರೆ ಎಲ್ಲವನ್ನೂ ಅದು ಒಳಗೊಂಡಿದೆ. ಎಲ್ಲವೂ ಕ್ರಿಸ್ತನ ಸೇವೆಗೇ ಉಪಯೋಗಿಸಲ್ಪಡಬೇಕು. ಆತನ ಶಿಷ್ಯರಾಗಬಯಸುವ ನಾವು, ನಮ್ಮನ್ನೂ ಮತ್ತು ನಮ್ಮಲ್ಲಿರುವುದನ್ನೆಲ್ಲಾ ಆತನಿಗೆ ಒಪ್ಪಿಸಿಕೊಡಬೇಕು. ಹಾಗೆ ಒಪ್ಪಿಸಿಕೊಟ್ಟದ್ದನ್ನು ಆತ ಶುದ್ಧಿಗೊಳಿಸಿ ಮತ್ತು ಘನಪಡಿಸಿ, ನಮ್ಮ ಮಾನವ ಸಹೋದರರುಗಳಿಗೆ ಆಶೀರ್ವಾದವಾಗಿ, ಆತನನ್ನು ಮಹಿಮೆ ಪಡಿಸುವುದಕ್ಕಾಗಿ

ಅವುಗಳನ್ನು ಮತ್ತೆ ನಮಗೇ ಹಿಂತಿರುಗಿಸಿಕೊಡುವನು"– ಎಲೆನ್ ಜಿ ವೈಟ್, ಕ್ರೈಸ್ಟ್ಸ್ ಆಬ್ಜೆಕ್ಟ್ ಲೆಸನ್ಸ್, ಪುಟ 328.

ಇಷ್ಟೇ ಅಲ್ಲದೆ ದೇವರು, ಪ್ರವಾದನೆಯ ವರ ಮತ್ತು ಸಭೆಯ ವಿವಿಧ ಶಾಖೆಗಳಲ್ಲಿ ವಿಶಿಷ್ಟ ಸೇವೆಯ ವರಗಳನ್ನು ಈ ಭೂಮಿಯ ಮೇಲೆ ಸಂಸ್ಥಾಪಿಸಿದ್ದಾನೆ. ಈ ವರಗಳ ಪಟ್ಟಿಯಲ್ಲಿ ಬೋಧಕರು, ಸಭಾಹಿರಿಯರು ಮತ್ತು ಶಿಕ್ಷಕ–ಶಿಕ್ಷಕಿಯರನ್ನು ಸೇರಿಸಬಹುದು. ಇವರು ಸಭೆಯಲ್ಲಿರುವ ಪ್ರತಿ ಸಭಿಕ/ ಸಭಿಕಳನ್ನು ಸೇವೆಮಾಡಲು ಪೋಷಣೆ ಮಾಡಬೇಕು ಮತ್ತು ಸಿದ್ಧಪಡಿಸಬೇಕು (ಓದಿಕೊಳ್ಳಿ: ಎಫೆಸ 4:11,12). ಸಭೆಯ ಪ್ರತಿ ಸಭಿಕರಲ್ಲಿರುವ ಆಧ್ಯಾತ್ಮಿಕ ವರವನ್ನು ಕಂಡುಕೊಳ್ಳಲು ಸಭೆಯ ನಾಯಕರುಗಳು ಸಹಾಯಮಾಡಲಿ. ಇದೇ ಅವರ ಕೆಲಸ ಸಹ ಮತ್ತು ಒಮ್ಮೆ ತಮ್ಮಲ್ಲಿರುವ ಆಧ್ಯಾತ್ಮಿಕ ವರವೇನು ಎಂಬುದನ್ನು ಕಂಡುಕೊಂಡ ಮೇಲೆ ಆ ವರವನ್ನು ಸಭೆಯನ್ನು ಬೆಳೆಸಲು ಮತ್ತು ಕಟ್ಟಲು ಉಪಯೋಗಿಸಿಕೊಳ್ಳುವಂತೆ  ನೋಡಿಕೊಳ್ಳಬೇಕು.

**ನಿಮ್ಮಲ್ಲಿರುವ ಸ್ವಭಾವಸಿದ್ಧ ಪ್ರತಿಭೆಗಳಾವುವು? ಒಂದು ಜಾತ್ಯಾತೀತ ವಾತಾವರಣದಲ್ಲಿ ಉಪಯುಕ್ತವೂ ಮತ್ತು ಪ್ರಯೋಜನಕಾರಿಯೂ ಆದ ಈ ಪ್ರತಿಭೆಗಳು, ಸಭೆಗೂ ಆಶೀರ್ವಾದವಾಗುವುದು ಹೇಗೆ?**

**ಬುಧವಾರ** **ಆಗಸ್ಟ್, 3**

## ನಿಮ್ಮ ವರಗಳನ್ನು ಕಂಡುಕೊಳ್ಳುವರು

**1 ಕೊರಿಂಥ 1:4–9ರ ಜೊತೆಗೆ 2 ಕೊರಿಂಥ 1:20–22ನ್ನು ಹೋಲಿಸಿರಿ. ದೇವರ ವಾಗ್ದಾನಗಳು ಮತ್ತು ವಿಶೇಷವಾಗಿ ಕ್ರಿಸ್ತನಾಗಮನಕ್ಕೆ ಪೂರ್ವಭಾಗಿಯಾಗಿ ಕೊಡಲ್ಪಡುವ ಆಧ್ಯಾತ್ಮಿಕ ವರಗಳ ವಿಷಯದಲ್ಲಿ ಈ ವೇದಭಾಗಗಳು ಹೇಳುವುದೇನು?**

______________________________________

______________________________________

ಕ್ರಿಸ್ತನು ಬರುವ ಮುನ್ನ, ಪವಿತ್ರಾತ್ಮನ ಎಲ್ಲಾ ವರಗಳನ್ನು ಆತನ ಸಭೆಯು ಸ್ಪಷ್ಟವಾಗಿ ರುಜುವಾತುಪಡಿಸುವುದೆಂದು ದೇವರು ವಾಗ್ದಾನ ಮಾಡಿದ್ದಾನೆ.

ಆತನ ವಾಗ್ದಾನಗಳು ಖಂಡಿತವಾದವು. ಆತನು ನಮ್ಮ ಹೃದಯಗಳಲ್ಲಿ ಪವಿತ್ರಾತ್ಮನ ಸಾಕ್ಷಿಯನ್ನು ಕೊಟ್ಟಿದ್ದಾನೆ. ನಮಗೆ ಕೊಡಲ್ಪಟ್ಟಿರುವ ವರಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಆ ಸಾಕ್ಷಿ ಒಂದು ಮಾರ್ಗದರ್ಶಿಯೋಪಾದಿಯಲ್ಲಿ ಕೆಲಸ ಮಾಡುತ್ತದೆ. ಆ ವರಗಳನ್ನು ಕೊಡುವಾತನು ದೇವರೇ ಮತ್ತು ತನ್ನ ಆತ್ಮನ ಮೂಲಕ ಆ ವರಗಳನ್ನು ನಮಗೆ ಪ್ರಕಟಿಸುವವನೂ ಆತನೇ ಆಗಿರುತ್ತಾನೆ.

**ಲೂಕ 11:13; ಯಾಕೋಬ 1:5 ಮತ್ತು ಮತ್ತಾಯ 7:7ನ್ನು ಓದಿಕೊಳ್ಳಿರಿ. ನಮ್ಮಲ್ಲಿ ಪ್ರತಿಯೊಬ್ಬನಿಗೂ ದೇವರು ಕೊಟ್ಟಿರುವ ವರಗಳನ್ನು ಕಂಡುಕೊಳ್ಳುವ ಬಯಕೆಯಿದ್ದರೆ, ನಮ್ಮನ್ನು ಏನು ಮಾಡಲು ಆತನು ಆಹ್ವಾನಿಸುತ್ತಿದ್ದಾನೆ?**

________________________________________

________________________________________

ನಾವು ನಮ್ಮನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಣೆ ಮಾಡಿಕೊಂಡಾಗ ಮತ್ತು ನಮಗೆ ಆತನು ನೀಡಿರುವ ವರಗಳನ್ನು ಪ್ರಕಟಿಸುವಂತೆ ಬೇಡಿಕೊಂಡಾಗ ನಾವು ದೇವರಾತ್ಮನ ವರಗಳನ್ನು ಪಡೆದುಕೊಳ್ಳುತ್ತೇವೆ. ನಮ್ಮ ಹೃದಯ ನಮ್ಮನ್ನು ನಾವು ಹೊಗಳಿಕೊಳ್ಳುವ ಭಾವನೆಗಳಿಂದ ಹೊರತಾದಾಗ ಮತ್ತು ನಮ್ಮ ಪ್ರಥಮ ಪ್ರಾಶಸ್ತ್ಯ ಯೇಸುಕ್ರಿಸ್ತನಿಗೆ ಸೇವೆ ಸಲ್ಲಿಸುವುದೇ ಆದಾಗ, ಆತನು ನಮಗಾಗಿ ಇಟ್ಟಿರುವ ಆಧ್ಯಾತ್ಮಿಕ ವರಗಳಿಂದ ಆತನ ಆತ್ಮವು ನಮ್ಮ ಮೇಲೆ ಪ್ರಭಾವ ಬೀರುವುದು. "ನಂಬಿಕೆಯಿಂದಲೂ ಮತ್ತು ಪ್ರಾರ್ಥನೆಯಿಂದಲೂ ಶಿಷ್ಯರು ತಮ್ಮನ್ನು ಸಂಪೂರ್ಣವಾಗಿ ಆತನ ಸೇವೆಗೆ ಒಪ್ಪಿಸಿಕೊಡುವ ತನಕ ಅವರ ಮೇಲೆ ಆತ್ಮನ ಸುರಿಯೋಣ ಆಗಲಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪರಲೋಕದ ಐಶ್ವರ್ಯವನ್ನೆಲ್ಲಾ ಕ್ರಿಸ್ತನ ಹಿಂಬಾಲಕರಿಗೆ ಒಪ್ಪಿಸಿಕೊಡಲಾಗುವುದು.... ಕ್ರಿಸ್ತನ ಮೂಲಕ ಆ ವರಗಳಲ್ಲಿ ನಮ್ಮದಾಗಿದೆ, ಆದರೆ ನಮ್ಮ ನಿಜವಾದ ಐಶ್ವರ್ಯ, ನಾವು ದೇವರಾತ್ಮನನ್ನು ಸ್ವೀಕಾರ ಮಾಡುವುದನ್ನು ಆತುಕೊಂಡಿದೆ"– ಎಲೆನ್ ಜಿ ವೈಟ್, ಕ್ರೈಸ್ಟ್ ಆಬ್‌ಜೆಕ್ಟ್ ಲೆಸನ್ಸ್, ಪುಟ 327.

ದೇವರಿಗೆ ನಾವು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುವುದಕ್ಕಾಗಿ ಆತನು ನಮಗೆ ಆಧ್ಯಾತ್ಮಿಕ ವರಗಳೆಂಬ ಗುಣಧರ್ಮಗಳನ್ನು ಕೊಡುತ್ತಾ ಬಂದಿದ್ದಾನೆ.

ಕೊರಿಂಥ 12:4–6 ಆ ಆಧ್ಯಾತ್ಮಿಕ ವರಗಳನ್ನು ಎಲ್ಲೆಲ್ಲಿ ಉಪಯೋಗ ಮಾಡಿಕೊಳ್ಳುತ್ತೇವೆಯೋ ಅಲ್ಲಿ ದೇವರ ಸೇವೆ ಮುನ್ಸಾಗುತ್ತಿರುತ್ತದೆ. ದೇವರ ಸೇವೆಗಾಗಿ ನಾವು ಕೈಗೊಳ್ಳುವ ಚಟುವಟಿಕೆಗಳು ವಿಶಿಷ್ಟ ಘಟನೆಗಳಾಗಿ ನಮ್ಮ ಆಧ್ಯಾತ್ಮಿಕ ವರಗಳನ್ನು ಬಳಸಿಕೊಳ್ಳುತ್ತಿರುತ್ತವೆ. ಆಧ್ಯಾತ್ಮಿಕ ವರಗಳು ಪರಿಪೂರ್ಣವಾಗಿ ಬೆಳೆದು ಬರುವುದಿಲ್ಲ. ಪವಿತ್ರಾತ್ಮ ದೇವರು, ಕೆಲವೊಂದು ಸೇವೆಯ ರಂಗ ನಿಮ್ಮ ಮೇಲೆ ಆಳವಾದ ಪರಿಣಾಮ ಬೀರುವಂತೆ ಮಾಡಿದಾಗ, ಒಂದು ವಿಶಿಷ್ಟವಾದ ದೇವರ ಸೇವೆಯಲ್ಲಿ ತೊಡಗಲು ಆತನು ನಿಮ್ಮನ್ನು ಕೈನಡೆಸಲೆಂದು ಪ್ರಾರ್ಥನೆ ಮಾಡಿರಿ. ಆಗ ನೀವು ಸುವಾರ್ತೆ ಸಾರಲ್ಪಡದ ಸ್ಥಳಗಳಿಗೂ ಹೋಗಿ, ನಿಮ್ಮ ಆಧ್ಯಾತ್ಮಿಕ ವರಗಳನ್ನು ಅಲ್ಲಿಯೂ ಉಪಯೋಗಿಸಲ್ಪಡುವ ಹಾಗೆ ನೋಡಿಕೊಳ್ಳಬಹುದು.

ನಿಮ್ಮಲ್ಲಿರುವ ವಿಶೇಷವಾದ ವರದಾನಗಳಾವುವು, ಅದರಲ್ಲೂ ಮುಖ್ಯವಾಗಿ, ದೇವರ ಸೇವೆಗಾಗಿ ಅವುಗಳನ್ನು ಸುಧಾರಿಸಿಕೊಳ್ಳುವುದು ಹೇಗೆ?

**ಗುರುವಾರ** **ಆಗಸ್ಟ್, 6**

## ನಮ್ಮ ವರಗಳನ್ನು ಬೆಳೆಸುವಿಕೆ

**ತಲಾಂತನ್ನು ಕುರಿತ ಸಾಮ್ಯವನ್ನು ಮತ್ತಾಯ 25:14–30ರಲ್ಲೂ ಓದಿಕೊಳ್ಳಿರಿ. ಈ ಸಾಮ್ಯದಲ್ಲಿ ಯಾವುದು ನಿಮಗೆ ಮಹತ್ವಕಾರಿ ಆಲೋಚನೆ ಎನಿಸುತ್ತದೆ? ದೇವರು, ಮೊದಲ ಇಬ್ಬರು ಸೇವಕರುಗಳನ್ನು ಶ್ಲಾಘಿಸಿ, ಕೊನೆಯವನನ್ನು ಖಂಡಿಸಿದ್ದು ಏಕೆ? ನಮ್ಮ ತಲಾಂತುಗಳನ್ನು ಹೇಗೆ ಉಪಯೋಗಿಸಬೇಕು ಎಂಬ ವಿಷಯದಲ್ಲಿ ಈ ಸಾಮ್ಯ ನಮಗೆ ಹೇಳುವುದೇನು? ವಿಶೇಷವಾಗಿ ಮತ್ತಾಯ 25:29ನೇ ವಚನದೆಡೆ ನಿಮ್ಮ ಗಮನ ಹರಿಸಿರಿ.**

ಮಾಲಿಕನು, ತನ್ನ ಆಳುಗಳಿಗೆ, "ಅವರ ಸಾಮರ್ಥ್ಯ"ಗಳಿಗನುಸಾರವಾಗಿ ತಲಾಂತನ್ನು ಹಂಚಿದ್ದನು? ಮತ್ತಾಯ 25:15. ಪ್ರತಿಯೊಬ್ಬ ಆಳೂ ಬೇರೆ

ಬೇರೆಯಾದ ಮೊತ್ತವನ್ನು ಪಡೆದುಕೊಂಡಿದ್ದನು. ಒಬ್ಬ 5 ತಲಾಂತನ್ನು, ಮತ್ತೊಬ್ಬ 2 ತಲಾಂತನ್ನು ಹಾಗೂ ಇನ್ನೊಬ್ಬ 1 ತಲಾಂತನ್ನು ಸ್ವೀಕಾರ ಮಾಡಿಕೊಂಡಿದ್ದರು. ತಮಗೆ ಕೊಟ್ಟಿದ್ದ ತಲಾಂತನ್ನು ಬಂಡವಾಳವನ್ನಾಗಿಸಿಕೊಳ್ಳುವ ಅಥವಾ ತಮಗೆ ಹೇಗೆ ಬೇಕೋ ಹಾಗೆ ಉಪಯೋಗಿಸಿಕೊಳ್ಳುವ ಆಯ್ಕೆ ಅವರಿಗೆ ಕೊಡಲ್ಪಟ್ಟಿತ್ತು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ : ಅವರಿಗೆ ಕೊಟ್ಟಿದ್ದ ತಲಾಂತು ಅವರದಲ್ಲ, ಅವರಿಗೆ ಕೆಲಸ ವಹಿಸಿ ಹೋದ ಮಾಲಿಕನದು.

ಯಾರಲ್ಲಿ ಶ್ರೇಷ್ಠವಾದ ಮತ್ತು ಯಾರಲ್ಲಿ ನಿಕೃಷ್ಟವಾದ ತಲಾಂತುಗಳಿವೆ ಎಂಬುದು ಮಾಲಿಕನ ಚಿಂತೆಯಾಗಿರಲಿಲ್ಲ. ಅವರಿಗೆ ಎಷ್ಟು ತಲಾಂತು ಕೊಡಲ್ಪಟ್ಟಿತ್ತು ಎಂಬುದೂ ಆತನ ಚಿಂತೆಯಾಗಿರಲಿಲ್ಲ. ಆದರೆ ಪ್ರತಿಯೊಬ್ಬನೂ ತನಗೆ ಕೊಡಲ್ಪಟ್ಟ ತಲಾಂತನ್ನು ಏನು ಮಾಡಿದನು ಎಂಬುದು ಆತನ ಚಿಂತೆಯಾಗಿತ್ತು.

ಪೌಲನು ಈ ಚಿಂತನೆಯನ್ನು 2 ಕೊರಿಂಥ 8:12ರಲ್ಲಿ ಹೀಗೆ ವ್ಯಕ್ತಪಡಿಸಿದ್ದಾನೆ: ಒಬ್ಬನು ಕೊಡುವುದಕ್ಕೆ ಮನಸ್ಸುಳ್ಳವನಾಗಿರುವಲ್ಲಿ ಅವನು ತನ್ನಲ್ಲಿ ಇರುವುದಕ್ಕೆ ಅನುಸಾರವಾಗಿ ಕೊಟ್ಟರೆ ಅದು ಸಮರ್ಪಕವಾಗಿರುವುದು. ಅವನಿಗೆ ಇಲ್ಲದ್ದನ್ನು ದೇವರು ಕೇಳಿಕೊಳ್ಳುವುದಿಲ್ಲ". ದೇವರಿಗೆ ನಿಮ್ಮಲ್ಲಿ ಏನಿದೆ ಎಂಬುದು ಮುಖ್ಯವಲ್ಲ, ಆದರೆ ನಿಮಗಿರುವುದನು ಉಪಯೋಗಿಸಿಕೊಂಡು ನೀವು ಆತನಿಗಾಗಿ ಏನು ಮಾಡುತ್ತೀರಿ ಎಂಬುದೇ ಇಲ್ಲಿನ ಮುಖ್ಯವಾದ ಅಂಶ.

ದೇವರು ಮೊದಲ ಇಬ್ಬರು ಸೇವಕರುಗಳನ್ನು ಶ್ಲಾಘಿಸಿದ್ದರು. ಕಾರಣ : ಅವರಿಬ್ಬರು ಪ್ರಾಮಾಣಿಕವಾಗಿ ತಮಗೆ ಕೊಡಲ್ಪಟ್ಟು ತಲಾಂತನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಂಡಿದ್ದರು. ಅವರು ಅವುಗಳನ್ನು ಉಪಯೋಗಿಸಿಕೊಂಡ ಕಾರಣಕ್ಕೆ ಅವು ಹೆಚ್ಚತೊಡಗಿದ್ದವು. ಆದರೆ ಆ ಕೆಟ್ಟ ಆಳು ತನ್ನ ತಲಾಂತನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಲಿಲ್ಲ. ಆದ್ದರಿಂದಲೇ ಅದು ಹೆಚ್ಚಾಗಲೂ ಇಲ್ಲ. "ನಮ್ಮನ್ನೂ ಮತ್ತು ದೇವರನ್ನೂ ಹಾಗು ನಮ್ಮನ್ನು ಮತ್ತು ನಮ್ಮ ಸಹ–ಮಾನವನನ್ನು ಬಂಧಿಸುವ ಕೊಂಡಿಯಾಗಿರುವುದೇ ಸೇವೆಯ ನಿಯಮ ಎನಿಸಿಕೊಳ್ಳುತ್ತದೆ". ಎಲೆನ್ ಜಿ ವೈಟ್, ಕ್ರೈಸ್ಟ್ಸ್ ಆಬ್ಜೆಕ್ಟ್ ಲೆಸನ್ಸ್, ಪುಟ 326. ಆ ಅಪ್ರಾಮಾಣಿಕ ಆಳು ತನಗಿದ್ದ ಸೇವೆಯ ಸದಾವಕಾಶವನ್ನು

ದುರ್ವ್ಯಯ ಮಾಡಿದ್ದ ಮತ್ತು ಕೊನೆಯ ಸೇವೆ ಮಾಡುವ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದ.

ದೇವರು ನಾನು ಮಹಿಮೆಪಡಿಸಲು ಆತನು ದಯಪಾಲಿಸಿದ ಆಧ್ಯಾತ್ಮಿಕ ವರಗಳನ್ನು ಉಪಯೋಗಿಸಿಕೊಂಡಾಗ, ಆ ಆಧ್ಯಾತ್ಮಿಕ ವರಗಳು ಅಭಿವೃದ್ಧಿಯಾಗುತ್ತವೆ, ಹೆಚ್ಚಾಗುತ್ತವೆ ಮತ್ತು ಬೆಳೆಯುತ್ತವೆ. ದೇವರು ನಿಮಗೆ ಆಧ್ಯಾತ್ಮಿಕ ವರಗಳನ್ನು ಕೊಟ್ಟಿರುವನೆಂದು ಹೇಗೆ ಕಂಡುಕೊಳ್ಳುವಿರಿ? ದೇವರಲ್ಲಿ ವಿನಮ್ರತೆಯಿಂದ ಬೇಡಿಕೊಳ್ಳಿರಿ. ಆತನ ಸೇವೆಯನ್ನು ಯಾವ ಸ್ಥಳದಲ್ಲಿ ಮಾಡಬೇಕೆಂದು ಪ್ರಾರ್ಥನೆಯಲ್ಲಿ ಕೇಳಿಕೊಂಡರೆ, ಆತನು ನಿಮಗೆ ಅದನ್ನು ಖಂಡಿತ ಪ್ರಕಟಿಸುವನು. ಆತನ ಪ್ರಭಾವ ನಿಮ್ಮ ಮೇಲೆ ಆದಾಗ, ನೀವು ಆತನ ಸೇವೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವಿರಿ. ನೀವು ನಿಮಗೆ ಲಭ್ಯವಾದ ಆಧ್ಯಾತ್ಮಿಕ ವರಗಳನ್ನು ದೇವರ ಸೇವೆಗೆ ಉಪಯೋಗಿಸಿಕೊಂಡಾಗ ಅವು ಬೆಳೆಯತೊಡಗುತ್ತವೆ ಮತ್ತು ನೀವು ಆತನ ಸೇವೆಯಲ್ಲಿ ಸಂತೃಪ್ತಿಯನ್ನು ಕಂಡುಕೊಳ್ಳುವಿರಿ.

**ಈ ಸಾಮ್ಯವನ್ನು ಕುರಿತು ಚಿಂತನೆ ನಡೆಸಿರಿ. ನಿಮ್ಮ ಸ್ವಂತ ಜೀವನಕ್ಕೆ ಅದನ್ನು ಅನ್ವಯ ಮಾಡಿಕೊಳ್ಳಿರಿ. ದೇವರಿಂದ ಕೊಡಲ್ಪಟ್ಟ ವರಗಳನ್ನು ನೀವು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದೀರಿ ಎಂಬುದನ್ನು ಕುರಿತು ನಿಮ್ಮ ಯಾವ ಮಾತನಾಡುತ್ತಿದೆ? (ನಿಮ್ಮಲ್ಲಿ ಏನಿದೆಯೋ ಅದು ದೇವರಿಂದ ಬಂದ ವರ ಎಂಬುದನ್ನು ಸಹ ಜ್ಞಾಪಕದಲ್ಲಿಟ್ಟುಕೊಳ್ಳಿರಿ).**

**ಶುಕ್ರವಾರ** **ಆಗಸ್ಟ್**, 7

**ಹೆಚ್ಚಿನ ಚಿಂತನೆ :** ವೈಟಮ್ಮನವರ ಆಂಗ್ಲಭಾಷೆಯ ಕ್ರೈಸ್ಟ್ಸ್ ಆಬ್ಜೆಕ್ಟ್ ಲೆಸನ್ಸ್ ಎಂಬ ಪುಸ್ತಕದ, "ಟ್ಯಾಲೆಂಟ್ಸ್" ಎಂಬ ಅಧ್ಯಾಯವನ್ನು ಪುಟ 325–365ರಲ್ಲಿ ಓದಿಕೊಳ್ಳಿರಿ.

ಆಧ್ಯಾತ್ಮಿಕ ವರಗಳನ್ನು ಸತ್ಯವೇದದ ಬೋಧನೆಗನುಸಾರವಾಗಿ ಸರಿಯಾಗಿ ಅರ್ಥಮಾಡಿಕೊಳ್ಳುವಿಕೆ ಸಭೆಯಲ್ಲಿ ಒಗ್ಗಟ್ಟನ್ನು ತರುತ್ತದೆ. ಸಭೆಗೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ಯೋಗ್ಯಸ್ಥಾನಮಾನವಿದೆ. ನಮ್ಮೆಲ್ಲರ ಅವಶ್ಯಕತೆ ಸಭೆಗಿದೆ

ಎಂದುಕೊಂಡಾಗ ಒಂದು ಐಕ್ಯ ಮನೋಭಾವ ಮಾಡುತ್ತದೆ. ಸೇವೆಗಾಗಿ ಪ್ರತಿಯೊಬ್ಬ ಸದಸ್ಯನೂ ಆಧ್ಯಾತ್ಮಿಕ ವರವನ್ನು ದೇವರಿಂದ ವರಪಡೆದುಕೊಂಡೇ ಬಂದಿದ್ದಾನೆ.

ನಮ್ಮ ಶ್ರೇಷ್ಠ ಗುರು, ಕ್ರಿಸ್ತನಿಗಾಗಿ ಮಾಡಬೇಕಾದ ಕೆಲಸವನ್ನು ಪ್ರತಿಯೊಬ್ಬರಿಗೂ ವಹಿಸಿಕೊಡಲಾಗಿದೆ. ಆತನ ಪ್ರತಿ ಸೇವಕನಿಗೆ ವಿಶೇಷವಾದ ವರಗಳನ್ನು ಅಥವಾ ಪ್ರತಿಭೆಗಳನ್ನು ಕೊಡಲಾಗಿದೆ. "ಅವನು ಒಬ್ಬನಿಗೆ ಐದು ತಲಾಂತು ಒಬ್ಬನಿಗೆ ಎರಡು, ಒಬ್ಬನಿಗೆ ಒಂದು, ಹೀಗೆ ಅವನವನ ಸಾಮರ್ಥ್ಯದ ಪ್ರಕಾರ ಕೊಟ್ಟು ಬೇರೊಂದು ದೇಶಕ್ಕೆ ಹೋದನು". ಪ್ರತಿಯೊಬ್ಬ ಸೇವಕನಲ್ಲೂ ಕೆಲವೊಂದು ಭರವಸೆಯಿದೆ, ಆ ಭರವಸೆಗೆ ಅವನೇ ಜವಾಬ್ದಾರ; ವೈವಿಧ್ಯಮಯವಾದ ಭರವಸೆಗಳು, ನಮ್ಮ ವೈವಿಧ್ಯಮಯ ಸಾಮರ್ಥ್ಯಗಳಿಗೆ ಅನುರೂಪವಾಗಿರುತ್ತವೆ. "ದೇವರು ನಮಗೆ ಆಧ್ಯಾತ್ಮಿಕ ವರಗಳನ್ನು ಕೊಡುವಾಗ ಪಕ್ಷಪಾತವನ್ನೇನೂ ಮಾಡಿಲ್ಲ. ತನ್ನ ಸೇವಕರ ಶಕ್ತಿಸಾಮರ್ಥ್ಯವೇನು ಎಂದು ತಿಳಿದ ದೇವರು ಅದಕ್ಕೆ ತಕ್ಕಂತೆಯೇ ತಲಾಂತುಗಳನ್ನು ತನ್ನ ಸೇವಕರಿಗೆ ಹಂಚಿರುತ್ತಾನೆ ಮತ್ತು ಅದಕ್ಕೂ ಸರಿಹೊಂದುವ ರೀತಿಯಲ್ಲಿ ಆತನಿಗೆ ಕೆಲಸಮಾಡಿ, ವರದ ಫಲ ಹಿಂತಿರಿಗಿಸುವುದನ್ನು ಆತನ ನಮ್ಮಿಂದ ಎದುರು ನೋಡುತ್ತಾನೆ"– ಎಲೆನ್ ಜಿ ವೈಟ್, ಟೆಸ್ಟಿಮೊನೀಸ್ ಫಾರ್ ದಿ ಚರ್ಚ್, ಸಂಪುಟ 2, ಪುಟ 282.

ದೇವರು ಆತ್ಮೀಯ ವರ ಕೊಟ್ಟಿರುವುದು ಆತನನ್ನು ಮಹಿಮೆ ಪಡಿಸುವುದಕ್ಕಾಗಿಯೇ ವಿನಹ, ನಮ್ಮನ್ನು ಮಹಿಮೆ ಪಡಿಸಿಕೊಳ್ಳುವುದಕ್ಕಲ್ಲ. ಆತನ ನಾಮವನ್ನು ಉನ್ನತೀಕರಿಸಲು ಮತ್ತು ಆತನ ಕೆಲಸವನ್ನು ಅಭಿವೃದ್ಧಿ ಪಡಿಸಲೆಂದೇ ನಮಗೆ ಆಧ್ಯಾತ್ಮಿಕ ವರ ನೀಡಲಾಗಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಮ್ಮಲ್ಲಿ ಪ್ರತಿಯೊಬ್ಬರೂ ದೇವರಿಂದ ಆಧ್ಯಾತ್ಮಿಕ ವರಗಳನು ಪಡೆದುಕೊಂಡಿದ್ದೇವೆ. ಈ ಹೇಳಿಕೆಯನ್ನು ಕುರಿತು ಚಿಂತನೆ ನಡೆಸಿರಿ. ಸ್ಥಳೀಯ ಸಭೆಯ ಮೇಲೆ ಇದರ ಪ್ರಾಯೋಗಿಕ ಪರಿಣಾಮವೇನು? ಸೇವೆಯಲ್ಲಿ ಪ್ರತಿಯೊಬ್ಬ ಸೇವಕನೂ ಭಾಗಿಯಾಗಿಬಿಟ್ಟರೆ, ಈ ಹೇಳಿಕೆ

ಉಂಟುಮಾಡುವ ಬದಲಾವಣೆಯೇನು?

2. ಇನ್ನೊಬ್ಬ ಸದಸ್ಯನ ಆಧ್ಯಾತ್ಮಿಕ ವರ ನಿಮಗೆ ಹೇಗೆ ಆಶೀರ್ವಾದವಾಗಿ ಪರಿಣಮಿಸಿತ್ತು ಎಂಬುದನ್ನು ಸಬ್ಬತ್ ಶಾಲೆಯ ಇತರೇ ಸದಸ್ಯರೊಂದಿಗೆ ಹಂಚಿಕೊಳ್ಳಿರಿ. ನೀವು ನಿಮ್ಮಲ್ಲಿರುವ ನಿಮ್ಮ ಸ್ವಂತ ಆಧ್ಯಾತ್ಮಿಕ ವರಗಳನ್ನು ಅದ್ಹೇಗೆ ಕಂಡುಕೊಂಡಿರಿ ಎಂಬುದನ್ನು ತರಗತಿಯಲ್ಲಿರುವವರೊಂದಿಗೆ ಹಂಚಿಕೊಳ್ಳಿರಿ. ನಿಮ್ಮ ಆಧ್ಯಾತ್ಮಿಕ ವರಗಳಾವುವು ಮತ್ತು ಇನ್ನೊಬ್ಬರಿಗೆ ಆಶೀರ್ವಾದವಾಗುವ ಹಾಗೆ ಅವುಗಳನ್ನು ಹೇಗೆ ಉಪಯೋಗಿಸುವಿರಿ?

3. ನಾವು ಯಾವ ರೀತಿಯಲ್ಲಿ ನಮ್ಮ ಆಧ್ಯಾತ್ಮಿಕ ವರಗಳನ್ನು ಉಪಯೋಗಿಸಿ ಕೊಳ್ಳುತ್ತೇವೆಯೋ ಅಷ್ಟೇ ಚಂದವಾಗಿ ಅದು ಬೆಳೆದುಕೊಳ್ಳುತ್ತಾ ಹೋಗುತ್ತದೆ ಎಂದು ಇಂದಿನ ಪಾಠ ಹೇಳುತ್ತದೆ. ನಿಮ್ಮ ಹಳೆಯ ಜೀವನವನ್ನು ಮೆಲುಕುಹಾಕಿರಿ. ದೇವರು ನಿಮಗೆ ಆಧ್ಯಾತ್ಮಿಕ ವರಗಳ ಜೀವನವನ್ನು ಕೊಟ್ಟಿದ್ದನ್ನು ಮತ್ತು ನೀವು ಆ ವರಗಳನ್ನು ದೇವರನ್ನು ಮಹಿಮೆಪಡಿಸಲು ಉಪಯೋಗಿಸುತ್ತಿದ್ದಂತೆ ಆ ವರಗಳು ಅಭಿವೃದ್ಧಿಯಾಗುತ್ತಾ ಬಂದದ್ದನ್ನು ಗಮನಿಸಿದ್ದೀರಾ? ಇದೇ ಸಂದರ್ಭದಲ್ಲಿ, ಗುರುವಾರದ ಅಧ್ಯಯನದ ಕೊನೆಯ ಭಾಗದಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ದೇವರು ಕೊಟ್ಟ ವರಕ್ಕೆ ಅದೆಷ್ಟು ಪ್ರಾಮಾಣಿಕರಾಗಿ ನಡೆದುಕೊಳ್ಳುತ್ತಿದ್ದೀರಿ?